ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 121-124
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮತದಾರರ ಮೇಲೆ ಜಾತಿ ಮತ್ತು ಕೋಮುವಾದದ ಪ್ರಭಾವ

**ರವಿ ಎಸ್.ಎಲ್**
ಸಂಶೋಧನಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
*ಪ್ರಪಂಚದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದೆ. ಭಾರತದಲ್ಲಿ ಕೇಂದ್ರ ಚುನಾವಣಾ ಆಯೋಗದ ಮೇಲ್ವಿಚಾರಣೆಯಲ್ಲಿ ಚುನಾವಣೆಗಳು ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಕಾಲಕಾಲಕ್ಕೆ ನಡೆಯುತ್ತವೆ. ಭಾರತ ಸ್ವಾತಂತ್ರ್ಯ ನಂತರ ತನ್ನದೇ ಆದ ಸಂವಿಧಾನ ವ್ಯವಸ್ಥೆಯನ್ನು ಹೊಂದಿದ ಮೇಲೆ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಗೆ ಅವಕಾಶ ನೀಡಿದೆ. ಇಂದು 18 ವರ್ಷ ತುಂಬಿದ ಪ್ರತಿಯೊಬ್ಬ ಭಾರತೀಯ ಮತದಾನದಲ್ಲಿ ಪಾಲ್ಗೊಳ್ಳುತ್ತಾನೆ. ಪ್ರಜಾಪ್ರಭುತ್ವವನ್ನು 'ಜನರಿಂದ ಜನರಿಗಾಗಿ ಮತ್ತು ಜನರಿಗೋಸ್ಕರ' ಎಂದು ನಿರ್ವಹಿಸಿಕೊಂಡು ಬರಲಾಗಿದೆ. ಆದರೆ ವಾಸ್ತವವಾಗಿ ನಮ್ಮಲ್ಲಿ ಸಾಧ್ಯವಾಗಿರುವುದು. 'ಜನನರಿಂದ ಸರ್ಕಾರ' ಎಂಬುದೇ ವಿನಃ 'ಜನರಿಗಾಗಿ ಸರ್ಕಾರ'ವಲ್ಲ. ಮೊದಲನೆಯ ಸಂಗತಿಯ ಬಗ್ಗೆ ರಾಜಕೀಯ ಪಕ್ಷಗಳು ತುಂಬಾ ಜಾಗೃತವಾಗಿರುತ್ತವೆ. ಅಲ್ಲಿ ಅಧಿಕಾರರವಿರುತ್ತದೆ. ಆದರೆ ಸರ್ಕಾರ 'ಜನರಿಗಾಗಿ' ಎಂದಾಗಬೇಕಾದರೆ ಅಲ್ಲಿ ನಾಗರಿಕ ಸಮಾಜದ ಪಾತ್ರ ನಿರ್ಣಾಯಕವಾಗಿರುತ್ತದೆ. ಆದರೆ ಅನಕ್ಷರತೆಯ ಹೆಚ್ಚಳದಿಂದ ಭಾರತೀಯ ಮತದಾರರು ಚುನಾವಣೆಯ ಮಹತ್ವ, ಚುನಾವಣೆಯ ಪ್ರಣಾಳಿಕೆ ಮತ್ತು ಮತದಾನದ ಹಕ್ಕಿನ ಮೌಲ್ಯವನ್ನು ಅರ್ಥಮಾಡಿಕೊಂಡಿರುವುದಿಲ್ಲ. ಆದ್ದರಿಂದ ಮತದಾರರ ವರ್ತನೆಯ ಮೇಲೆ ಯಾವ ಅಂಶಗಳು ಪ್ರಭಾವ ಬೀರುತ್ತವೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಮತದಾರರ ವರ್ತನೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಮತದಾರ, ಮತದಾರನ ವರ್ತನೆ, ಮತದಾನ, ಪ್ರಜಾಪ್ರಭುತ್ವ, ಚುನಾವಣಾ ಆಯೋಗ, ಜಾತಿ ಮತ್ತು ಕೋಮುವಾದ.*

**ಪೀಠಿಕೆ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನ ಪಾತ್ರ ಪ್ರಧಾನವಾದುದು. ಚುನಾವಣೆಗಳಲ್ಲಿ ಮತದಾರರು ನಿರ್ಣಾಯಕರಾಗಿರುತ್ತಾರೆ. ಪಕ್ಷ ಹಾಗೂ ಅಭ್ಯರ್ಥಿಗಳಿಗೆ ಅಧಿಕಾರ ಕೊಡುವ ಹಾಗೂ ಪಡೆಯುವ ಅಧಿಕಾರ ಮತದಾರನಿಗಿರುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಮತದಾರ ನಿರ್ಣಾಯಕ ಪಾತ್ರವಹಿಸುತ್ತಾನೆ. ಆದರೆ ಮತದಾರ ನಿರ್ಧಾರ ಮಾಡುವಲ್ಲಿ ಎಡವುತ್ತಿರುವುದು ಕಂಡುಬಂದಿವೆ. ಅದಕ್ಕೆ ಕಾರಣ ಪ್ರತಿ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಭಾರತೀಯ ಮತದಾರರು ಸಾಮಾನ್ಯವಾಗಿ ಒಂದಲ್ಲ ಒಂದು ಪ್ರಭಾವಗಳಿಗೆ ಒಳಗಾಗಿ ಮತ ಚಲಾಯಿಸುತ್ತಾರೆ. ಮತದಾರರ ಮೇಲೆ ಪ್ರಭಾವ ಬೀರುವ ಅನೇಕ ಅಂಶಗಳಲ್ಲಿ ಜಾತಿ, ಧರ್ಮ, ಭಾಷೆ ಮತ್ತು ಕೋಮುವಾದ. ಇವು ಹೇಗೆ ಮತದಾರನ

***Please cite this article a:*** ರವಿ ಎಸ್.ಎಲ್. (2023). ಮತದಾರರ ಮೇಲೆ ಜಾತಿ ಮತ್ತು ಕೋಮುವಾದದ ಪ್ರಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 121–124.

ವರ್ತನೆಯ ಮೇಲೆ ಪ್ರಭಾವಬೀರುತ್ತದೆ ಎಂಬುದನ್ನು ಅಧ್ಯಯನದಿಂದ ಅರಿಯಬಹುದಾಗಿದೆ.

**ಜಾತಿಯ ಪ್ರಭಾವ**

ಭಾರತೀಯ ಸಂಪ್ರದಾಯ ಸಮಾಜದಲ್ಲಿ ಜಾತಿಯು ಮತದಾನದ ವರ್ತನೆಯಲ್ಲಿ ಅತಿ ಮಹತ್ವದ ನಿರ್ಧಾರಕ ಅಂಶವಾಗಿದೆ. ಭಾರತವು ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಜಾತ್ಯತೀತ ರಾಷ್ಟ್ರ ಎಂಬುದಾಗಿ ಘೋಷಿಸಿದೆ. ಆದರೆ ಜಾತಿ ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಕಂಡುಬರುತ್ತದೆ. ಇತ್ತೀಚೆಗೆ ರಾಜಕೀಯ ಅಧಿಕಾರವನ್ನು ಪಡೆಯಲು ಜಾತಿಯ ಅಂಶವನ್ನು ಒಂದು ಪ್ರಮುಖ ತಂತ್ರವಾಗಿ ಬಳಸುತ್ತಾರೆ. ರಾಜಕೀಯ ಅಧಿಕಾರವನ್ನು ಪಡೆಯಲು ಪ್ರಯತ್ನಿಸುವ ಜಾತಿಯ ಅಂಶದಿಂದ ಸಮಾಜದ ವಿಭಜನೆ ಮತ್ತು ಸಮಾಜದಲ್ಲಿ ಘರ್ಷಣೆ, ಮಾನಸಿಕ ಉದ್ವೇಗ, ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ಕಂಡುಬರುತ್ತದ.

ರಾಜಕೀಯ ಪ್ರಕ್ರಿಯೆ ಮತ್ತು ರಾಜಕೀಯ ಸಂಸ್ಕೃತಿಯ ಪಾಲ್ಗೊಳ್ಳುವಿಕೆಯ ಅಭಿವೃದ್ಧಿಯ ಹೆಚ್ಚಳದಿಂದ ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯ ರಚನೆಯ ಯಶಸ್ಸಿಗೆ ಬೆಂಬಲಿಸಿದಂತಾಗುತ್ತದೆ. ಜಾತಿಯ ಪ್ರಭಾವವನ್ನು ಸಾಮಾಜಿಕ ಹಂತದಲ್ಲಿನ ಪ್ರಜ್ಞೆಯಿಂದ ಕಡಿಮೆಗೊಳಿಸುವಲ್ಲಿ ಶಿಕ್ಷಣದ ಪ್ರಸಾರ, ಆಧುನೀಕರಣ, ಕೈಗಾರಿಕರಣ ಮತ್ತು ನಗರೀಕರಣಗಳು ಬಹಳ ಪ್ರಮುಖವಾಗಿವೆ. ಆದರೆ ರಾಜಕೀಯ ಹಂತದ ಒಲವು ಇತ್ತೀಚೆಗೆ ಬದಲಾಗುತ್ತಿದೆ. ಜಾತಿಯು ಇಂದು ರಾಜಕೀಯದಲ್ಲಿ ತೊಡಗುತ್ತಿರುವುದರಿಂದ ಜಾತಿ ಮತ್ತು ರಾಜಕೀಯ ಒಂದೇ ಆಗಿದ್ದು ಅನೇಕ ರಾಜಕೀಯ ಪಕ್ಷಗಳು ಜಾತಿಯ ಆಧಾರದ ಮೇಲೆ ಹುಟ್ಟಿಕೊಂಡಿವೆ. ಉದಾ: ಡಿ.ಎಂ.ಕೆ ಮತ್ತು ಎ.ಐ.ಡಿ.ಎಂ.ಕೆ ಈ ಪಕ್ಷಗಳು ಬ್ರಾಹ್ಮಣರ ವಿರುದ್ಧ ಹುಟ್ಟಿಕೊಂಡಂತಹ ಪಕ್ಷಗಳು ಸೋಷಿಯಲಿಸ್ಟ್ ರಿಪಬ್ಲಿಕನ್ ಪಾರ್ಟಿ ಆಫ್ ಎಜುವಾಸ್, ನ್ಯಾಷನಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ನಾಯರ್ಸ್ ಈ ಎಲ್ಲಾ ಪಕ್ಷಗಳು ಜಾತಿ ಆಧಾರದ ಮೇಲೆ ಹುಟ್ಟಿಕೊಂಡಿವೆ.

ನೈಜವಾಗಿ ಈ ಎಲ್ಲಾ ರಾಜಕೀಯ ಪಕ್ಷಗಳು ಸಂಘಟಿತವಾದ ಹಿತಾಸಕ್ತಿಗಳಿಂದ ನಿರ್ಮಿತವಾದವುಗಳೆಂದು ತೀರ್ಮಾನಿಸಲಾಗುವುದಿಲ್ಲ ಏಕೆಂದರೆ ಹಿಂದು ಸಮಾಜದಲ್ಲಿ ಜಾತಿಯು ಬಹಳ ಆಳವಾಗಿ ಬೇರೂರಿರುವ ಅಂಶವಾಗಿದೆ. ಅದೇ ರೀತಿ ಚುನಾವಣೆಗಳಲ್ಲಿ ಅಭ್ಯರ್ಥಿಗೆ ಟಿಕೆಟ್ ನೀಡುವಾಗಲೂ ಆ ಕ್ಷೇತ್ರದಲ್ಲಿ ಯಾವ ಜಾತಿ ಪ್ರಬಲವಾಗಿದೆ. ಆ ಜಾತಿಯಲ್ಲಿ ಯಾರು ಪ್ರಬಲ ವ್ಯಕ್ತಿ ಆ ವ್ಯಕ್ತಿಗೆ ಟಿಕೆಟ್ ನೀಡಿದರೆ ಹೆಚ್ಚು ಮತ ಪಡೆಯಬಲ್ಲನೇ ಈ ಎಲ್ಲಾ ಅಂಶಗಳನ್ನು ಟಿಕೆಟ್ ನೀಡುವ ಮೊದಲೇ ಗಮನಿಸುತ್ತಾರೆ. ಅದೇ ರೀತಿ ಜಾತಿ ಆಧಾರದ ಮೇಲೆ ಮತಚಲಾಯಿಸುತ್ತಾರೆ. ಹೀಗೆ ಭಾರತದಲ್ಲಿ ಜಾತಿಯು ಪ್ರಬಲವಾಗಿ ಬೇರೂರಿದ್ದು ಮತದಾರರ ಮತದಾನದ ವರ್ತನೆಯ ಮೇಲೆ ತನ್ನದೇ ಆದ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ಕೋಮುವಾದದ ಪ್ರಭಾವ**

ಮತದಾರರ ವರ್ತನೆಯ ಮೇಲೆ ಪ್ರಭಾವ ಬೀರುವ ಮತ್ತೊಂದು ಮುಖ್ಯ ಅಂಶವೆಂದರೆ ಕೋಮುವಾದ ಅಥವಾ ಮತೀಯವಾದ, ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರ. ಈ ರಾಷ್ಟ್ರದಲ್ಲಿ ಹಿಂದೂ ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಹೀಗೆ ವಿವಿಧ ಧರ್ಮದಿಂದ ಕೂಡಿದ ಜನರಿದ್ದಾರೆ. ಹೀಗೆ ಎಲ್ಲಾ ಧರ್ಮದಿಂದ ಕೂಡಿರುವ ಜನರು ಸಹಜವಾಗಿ ಒಂದು ಕಡೆ ಜೀವಸಬೇಕಾಗುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಭಾರತವನ್ನು ಒಡೆದು ಆಳುವ ನೀತಿಯೊಂದನ್ನು ಅನುಸರಿಸಿ ಹಿಂದೂ ಮುಸ್ಲಿಂರಲ್ಲಿ ಪ್ರತ್ಯೇಕತಾ ಭಾವನೆಗಳನ್ನು ಮೂಡಿಸಿ ಶತ್ರುಗಳನ್ನಾಗಿ ಮಾಡಿದರು. ಆದರೆ ಸ್ವಾತಂತ್ರ್ಯನಂತರ ಕೂಡ ಈ ಧರ್ಮದ ಜನರ ಮಧ್ಯೆ

ಸೌಹಾರ್ದಯುತ ಸಂಬಂಧ ಬೆಳೆಯದೆ ಒಬ್ಬರು ಮತ್ತೊಬ್ಬರನ್ನು ಸಂದೇಹ ಹಾಗೂ ಮತ್ಸರ ದೃಷ್ಟಿಯಿಂದ ನೋಡುವಂತಾಗಿದೆ. ರಾಷ್ಟ್ರದ ವಿವಿಧ ಕಡೆಗಳಲ್ಲಿ ಕೋಮು ಹಿಂಸಾಚಾರಗಳು ಕಂಡುಬರುತ್ತವೆ. ಉದಾಹರಣೆಗೆ ಭಾರತದಲ್ಲಿ ಕೋಮುವಾದಿ ಪಕ್ಷಗಳಾಗಿ ಮುಸ್ಲಿಂಲೀಗ್, ಹಿಂದೂ ಮಹಾಸಭಾ, ಅಕಾಲದಳ, ಕ್ರಿಶ್ಚಿಯನ್ ಪ್ರಜಾಪ್ರಭುತ್ವ ಪಕ್ಷ ಈ ಎಲ್ಲಾ ಪಕ್ಷಗಳು ಗೊಂದಲದ ರಾಜಕೀಯ ಪರಿಸ್ಥಿತಿಯನ್ನು ಉಂಟು ಮಾಡುತ್ತವೆ. ಇಂದಿನ ಸಮಾಜದಲ್ಲಿ ಕೋಮುಭಾವನೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ. ಇಂತಹ ಪರಿಸ್ಥಿತಿಯನ್ನು ಕೆಲವು ರಾಜಕೀಯ ಪಕ್ಷಗಳ ಮುಖಂಡರು ಅಧಿಕಾರ ಪಡೆಯಲು ಬಳಸುತ್ತಾರೆ. ಚುನಾವಣಾ ಸಂದರ್ಭದಲ್ಲಿ ಪ್ರತಿಯೊಂದು ರಾಜಕೀಯ ಪಕ್ಷವು ಅಭ್ಯರ್ಥಿಗೆ ಪಕ್ಷದಲ್ಲಿ ಟಿಕೆಟ್ ನೀಡುವ ಮೊದಲು ಆ ಕೋಮುವಿನಲ್ಲಿ ಮತದಾರರ ಸಂಖ್ಯೆಯನ್ನು ಪರಿಗಣಿಸುತ್ತಾರೆ. ಚುನಾವಣೆಗಳಲ್ಲಿ ಅಂತಹ ವ್ಯಕ್ತಿಗೆ ಟಿಕೆಟ್ ನೀಡುವುದರಿಂದ ಆ ಕೋಮು ಮತದಾರರ ಮತ ಪಡೆಯಬಹುದೇ ಎಂಬುದು ಕೆಲವರ ಅಭಿಪ್ರಾಯ ಇಂದು ಭಾರತದಲ್ಲಿ ಮತದಾರರ ಮೇಲೆ ಪ್ರಭಾವ ಬೀರುತ್ತಿರುವ ಅತ್ಯಂತ ಪ್ರಭಾವಿ ಅಂಶವೆಂದರೆ ಕೋಮುವಾದವೇ ಆಗಿದೆ.

ಇಂತಹ ವಿಚಾರಗಳಿಗೆ ಉತ್ತೇಜನ ನೀಡುತ್ತಿರುವ ಪಕ್ಷಗಳು ಕೂಡಾ ಜನಪ್ರಿಯವಾಗುತ್ತಿವೆ. ಉದಾಹರಣೆಗೆ 10ನೇ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು ಹಿಂದೂ ಧರ್ಮದ ಬಗ್ಗೆ ಹೆಚ್ಚು ಒಲವು ತೋರಿಸಿತು. ಇದರಿಂದ ಹಿಂದೂ ಮತದಾರರನ್ನು ಹೆಚ್ಚು ಪ್ರಭಾವಿಸಿತು. ಆದರೆ ಮುಸ್ಲಿಂ ಮತದಾರರು ಮತಚಲಾಯಿಸಲಿಲ್ಲ.

ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಜಾತಿ, ಧರ್ಮ, ಭಾಷೆ, ಮತ್ತು ಪ್ರಾದೇಶಿಕತೆ ಮತ್ತು ಮತ ಬ್ಯಾಂಕುಗಳು ಪ್ರಧಾನ ಪಾತ್ರವಹಿಸುತ್ತವೆ. ರಾಜಕೀಯ ಪಕ್ಷಗಳಿಗೆ ದೇಶದ ಅಳಿವು ಉಳಿವಿಗಿಂತಲೂ ತಮ್ಮ ಪಕ್ಷದ ಅಳಿವು ಉಳಿವು ಮುಖ್ಯವಾಗುತ್ತದೆ. ಜಾಗತಿಕ ವಲಯದ ರಾಜಕೀಯ ವಿದ್ಯಮಾನಗಳಲ್ಲಿ ಯಾರು ನಿರೀಕ್ಷಿಸಲಾಗದ ರೀತಿಯ ಬದಲಾವಣೆಗಳು ನಿರಂತರವಾಗಿ ಜರುಗುತ್ತಿರುತ್ತವೆ. ಭಾರತದಂತಹ ನೆಲದಲ್ಲಿ ನಾಗರಿಕತ್ವ ಎನ್ನುವುದು ಕಾಲದ ಅಗತ್ಯವನ್ನು ಮೀರಿ ಬೆಳೆಯಲೇ ಇಲ್ಲ ಅದಕ್ಕೆ ಕಾರಣ ನಮ್ಮ ಜನನಾಯಕರ ದೂರದರ್ಶಿತ್ವದ ಕೊರತೆ ಮತ್ತು ನಾಗರಿಕರ ನಮ್ಮದಿಯ ಬದುಕಿನ ಬಗ್ಗೆ ತಲೆಕೆಡೆಸಿಕೊಳ್ಳದಿರುವುದು. ಸ್ವಾತಂತ್ರ್ಯ ನಂತರದ ಆರಂಭದ ರಾಜಕೀಯ ಅಖಾಡದಲ್ಲಿರುವವರು ಹೀಗಿರಲಿಲ್ಲ. ಅವರಿಗೊಂದಷ್ಟು ಬದ್ಧತೆಗಳಿದ್ದವು. ಅವರು ರಾಜಕಾರಣ ಮಾಡಲೆಂದು ಏನೇನೋ ಮಾಡಿವವರಲ್ಲ ನೆಹರು, ಗಾಂಧಿ, ಶಾಸ್ತ್ರಿ, ಅಂಬೇಡ್ಕರರಂಥ ನಾಯಕರು ಒಟ್ಟು ಜನಹಿತವನ್ನು ಗಮನದಲ್ಲಿರಿಸಿಕೊಂಡು ಯೋಚಿಸುವವರಾಗಿದ್ದರು. ಈಗಿನಂತೆ ಕೇವಲ ಆಯಾ ಸಂದರ್ಭದಲ್ಲಿ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ರಾಜಕಾರಣ ಮಾಡುವವರಾಗಿರಲಿಲ್ಲ. ದೇಶದ ಜನತೆಯ ಹಿತ ಅವರಿಗೆ ಮುಖ್ಯವಾಗಿತು.

ಭಾರತದಂತಹ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಆಪತ್ತಿಗೆ ಸಿಲುಕುತ್ತಿರುವಂತೆ ಭಾಸವಾಗಲು... ಇಲ್ಲಿಯ ಜನರ ನಡುವೆ ಭ್ರಾತೃತ್ವದ ಭಾವನೆಗಳ ಕೊರತೆ, ಅದಕ್ಕೆ ಧರ್ಮ ಜಾತಿ ವರ್ಗದಂತಹ ಸಂಗತಿಗಳು ಕಾರಣವಾಗಿರಬಹುದು. ಇವೆಲ್ಲವುಗಳನ್ನು ಮೀರಿ ಒಟ್ಟು ಜನಹಿತದ ಹಿನ್ನಲೆಯಲ್ಲಿ ಕೆಲಸ ಮಾಡುವ ರಾಜಕಾರಣಿಗಳ ಅಗತ್ಯವಿದೆ. ಪ್ರತಿಯೊಬ್ಬ ನಾಗರಿಕನಲ್ಲಿಯೂ ನಾಯಕತ್ವದ ಗುಣಗಳ ಅಗತ್ಯವಿದೆ. ಅಂಥ ನಾಗರಿಕರಿಂದ ಆಯ್ಕೆಯಾದ ನಾಯಕರು ಮಾತ್ರ ಪ್ರಜಾಸತಾತ್ಮಕ ವ್ಯವಸ್ಥೆಗೆ ಅರ್ಥ ತುಂಬಬಲ್ಲರು ಎನ್ನುವುದನ್ನು ಅರಿಯಬೇಕಿದೆ. ರಾಜಕೀಯ ಒಂದು ವ್ಯಾಪಾರ ದಂದೆಯಾಗಿದೆ. ಅನ್ನ ಹಳಸಿತ್ತು ನಾಯಿ ಹಸಿದಿತ್ತು ಎನ್ನುವ ಗಾದೆ ಪಕ್ಷಗಳಿಗೆ ಮತ್ತು ಸಮಯ ಸಾಧಕ ವ್ಯಕ್ತಿಗಳಿಗೆ ಚನ್ನಾಗಿ ಒಪ್ಪುತ್ತದೆ.

**ಸಮಾರೋಪ**

ಗಾಂಧಿಜಿ "ಸ್ಪಿರಿಚುವಲ್ ಪೊಲಿಟಿಕ್ಸ್" ಎಂದು ಹೇಳುತ್ತಿದ್ದರು ಇಂದಿನ ರಾಜಕೀಯ ಪಕ್ಷಗಳು ಹಾಗೆಂದರೇನು ಎಂದು ಕೇಳುತ್ತವೆ. ಈ ಬೆಳವಣಿಗೆ ಇತ್ತೀಚಿನದಲ್ಲ 50 ವರ್ಷಗಳಿಂದ ರಾಜಕೀಯ ಪಕ್ಷಗಳು ಸತತವಾಗಿ ನೈತಿಕ ಅಧಃಪತನದ ದಾರಿ ಹಿಡಿದು ನಡೆಯುತ್ತಿವೆ. ಅಟ್ಟುವವನೂ ಬೆತ್ತಲೆ ಒಡುತ್ತಿರುವವನೂ ಇದು ಇಂದಿನ ರಾಜಕೀಯ ವೈಖರಿಯಾಗಿದೆ. ಭಾರತವು ಆರ್ಥಿಕ ಪ್ರಗತಿ ಸಾಧಿಸಿದಂತೆ ಧಾರ್ಮಿಕ ಗುರುತಿನ ವಿಚಾರಗಳು ತಾವೇ ತಾವಾಗಿ ಹಿಂದೆ ಸರಿಯುತ್ತವೆ. ಹಾಗೂ ಕೋಮು ಸಂಘರ್ಷಗಳು ಕಡಿಮೆಯಾಗುತ್ತವೆ. ಎಂಬುದು ನೆಹರು ಅವರ ನಂಬಿಕೆಯಾಗಿತ್ತು ಹಾಗಾಗಿ ಬದಲಾಗಬೇಕಿರುವುದು ಪಠ್ಯವಾಗಲೀ ಬೋಧನ ವಿಧಾನಗಳಾಗಲೀ ಅಲ್ಲ, ನಿಜಕ್ಕೂ ಬದಲಾಗಬೇಕಿರುವುದು ಸಮಾಜದ ಮತ್ತು ಪ್ರಭುತ್ವದ ಧೋರಣೆ ಮತ್ತು ಚಿಂತನೆ.

**ಪರಾಮರ್ಶನ ಗ್ರಂಥಗಳು**


- ದಿವಾಕರ ನಾ. (2020). *ಪ್ರಜೆ ಮತ್ತು ಪ್ರಜ್ಞೆ,* ಪ್ರಕಾಶಕರು: ನಾ ದಿವಾಕರ, ಪು.27, 379.
- ರಾಜೀವ ಭಾರ್ಗವ. (2019). *ಅಸ್ಮಿತೆ ಸಮಾಜಮುಖಿ ಮಾಸ ಪತ್ರಿಕೆ,* ಅಕ್ಟೋಬರ್. ಪು.29
- ಜನಾರ್ಧನ ಸಿ.ಎಸ್, (2019). *ಬದಲಾಗಬೇಕಿದೆ ಪ್ರಜಾಪ್ರಭುತ್ವದ ಧೋರಣೆ. ಸಮಾಜಮುಖಿ ಮಾಸ ಪತ್ರಿಕೆ,* ಅಕ್ಟೋಬರ್. ಪು.11
- ಜೋಗುರ ಡಿ.ಎಸ್.ಬಿ. (2018). *ನಾಗರಿಕರೇ ನಾಯಕರಾದಾಗ ಪ್ರಜಾಪ್ರಭುತ್ವದ ಗೆಲುವು. ಸಮಾಜಮುಖಿ ಮಾಸ ಪತ್ರಿಕೆ,* ಆಗಸ್ಟ್. ಪು.22.
- ದೊರೆಸ್ವಾಮಿ ಎಚ್.ಎಸ್, (2018). *ಚುನಾವಣೆ ಬವಣೆ: ಮತದಾರರಿಗೆ ಶಿಕ್ಷಣವೇ ಪರಿಹಾರ. ಸಮಾಜಮುಖಿ ಮಾಸ ಪತ್ರಿಕೆ,* ಆಗಸ್ಟ್. ಪು.3
- ಮೋಹನ ಜೆ. (2015). *ಮತದಾನ ಮತ್ತು ದಲಿತರು.* ರೋಹಿಣಿ ಎಂಟರ್‌ಪ್ರೈಸಸ್.